ಸ್ಯಾಂಡಲ್‌ವುಡ್‌ನಲ್ಲಿ ಪುರುಷರದ್ದೇ ಪಾರುಪತ್ಯ– ಅದು ಕ್ಯಾಮೆರಾ ಮುಂದೆಯೂ ಹೌದು, ಹಿಂದೆಯೂ ಹೌದು. ಹೆಣ್ಣು ಎಂದರೆ ಕ್ಯಾಮೆರಾದ ಮುಂದೆ ಕುಣಿಯುವುದಕ್ಕೆ ಮಾತ್ರ ಎನ್ನುವ ಪುರುಷ ಧೋರಣೆ ಈಗಲೂ ಗಾಂಧಿನಗರದಲ್ಲಿ ಮುಂದುವರಿದಿದೆ. ಕ್ಯಾಮೆರಾದ ಮುಂದೆ 'ಮಹಿಳೆಯೇ ದೊಡ್ಡ ಆಕರ್ಷಣೆ' ಎನ್ನುವಂತಹ ಸಿನಿಮಾಗಳು ಬಂದರೂ, ಆ ಸಿನಿಮಾದಲ್ಲೂ ಕ್ಯಾಮೆರಾದ ಹಿಂದೆ ಪುರುಷರದ್ದೇ ಪಾರಮ್ಯ. ಈಗ ವರ್ಷಕ್ಕೆ 200ಕ್ಕೂ ಹೆಚ್ಚು ಕನ್ನಡ ಸಿನಿಮಾಗಳು ತಯಾರಾಗುತ್ತಿವೆ. ಅವುಗಳಲ್ಲಿ ಮಹಿಳೆಯರು ನಿರ್ದೇಶನ ಮಾಡಿದ  ಚಿತ್ರಗಳೆಷ್ಟು ಎಂದು ಹುಡುಕಿದರೆ ಸಿಗುವುದು ಕೈಬೆರಳೆಣಿಕೆಯಷ್ಟು ಮಾತ್ರ. ಕೆಲವು ವರ್ಷ ಅದೂ ಇಲ್ಲ– ಒಂದೋ ಎರಡೋ ಅಷ್ಟೆ! ಕನ್ನಡದಲ್ಲಿ ವರ್ಷಕ್ಕೆ 50 ಸಿನಿಮಾಗಳು ತಯಾರಾಗುತ್ತಿದ್ದ ಕಾಲದಲ್ಲೂ ಮಹಿಳೆ ನಿರ್ದೇಶಕಿಯಾದ ಚಿತ್ರಗಳು ಲೆಕ್ಕಕ್ಕೇ ಸಿಗಲಿಲ್ಲ.



'ಚಂದ್ರ' ಚಿತ್ರದ ವಿಭಿನ್ನ ಪೋಸ್ಟರ್

ಕನ್ನಡದಲ್ಲಿ ಮಹಿಳೆಯರ ನಿರ್ದೇಶನದ ಸಿನಿಮಾಗಳು ಏಕೆ ಹೆಚ್ಚಾಗಿ ಬರುತ್ತಿಲ್ಲ? ಮಹಿಳೆಯರಿಗೆ ನಿರ್ದೇಶನ ಮಾಡುವ ಕಲೆ ಗೊತ್ತಿಲ್ಲವೆ? ಮಹಿಳೆಯರು ನಿರ್ದೇಶನ ಮಾಡಿದ ಸಿನಿಮಾಗಳಿಗೆ ಮಾರುಕಟ್ಟೆ ಸಿಗುವುದು ಕಷ್ಟವೆ? ಪ್ರೇಕ್ಷಕರು ಅಂತಹ ಚಿತ್ರಗಳನ್ನು ಕಡೆಗಣ್ಣಿನಿಂದ ನೋಡುತ್ತಾರೆಯೆ? ಅಥವಾ ಕನ್ನಡದ ನಿರ್ಮಾಪಕರಿಗೆ ನಿರ್ದೇಶಕಿಯರ ಮೇಲೆ ಭರವಸೆ ಇಲ್ಲವೆ?

1983ರಲ್ಲಿ ಪ್ರೇಮಾ ಕಾರಂತ ಅವರು ಬೆಳ್ಳಿತೆರೆಗೆ ತಂದ 'ಫಣಿಯಮ್ಮ' ಚಿತ್ರ ಹೊಸ ದಾಖಲೆಯೊಂದನ್ನು ಬರೆಯಿತು. ಸ್ಯಾಂಡಲ್‌ವುಡ್‌ನಲ್ಲಿ ಮಹಿಳೆಯೊಬ್ಬರು ನಿರ್ದೇಶಿಸಿದ ಮೊದಲ ಚಿತ್ರವದು. ರಂಗಭೂಮಿಯಲ್ಲಿ ಪಳಗಿ, ನಿರ್ದೇಶನದ ಬಗ್ಗೆ ತಮ್ಮದೇ ಆದ ಅಭಿರುಚಿ ಬೆಳೆಸಿಕೊಂಡಿದ್ದ ಪ್ರೇಮಾ ಕಾರಂತ ಅವರು, ಎನ್‌ಎಫ್‌ಡಿಸಿ ನಿರ್ಮಾಣದಲ್ಲಿ ನಿರ್ದೇಶಿಸಿದ ಈ ಚಿತ್ರ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ಗೆದ್ದುಕೊಂಡಿತು. ಬಾಲವಿಧವೆಯ ಪಾತ್ರದ ಎಲ್.ವಿ.ಶಾರದಾ ಅವರ 'ಸ್ಟಿಲ್' ಈಗಲೂ ಕನ್ನಡ ಚಿತ್ರರಸಿಕರ ಕಣ್ಣೋಟದಲ್ಲಿ ಸ್ಥಾಯಿಯಾಗಿ ಉಳಿದುಕೊಂಡಿದೆ. ಆ ಬಳಿಕ ಪ್ರೇಮಾ ಕಾರಂತರು ಇನ್ನೂ ಎರಡು ಸಿನಿಮಾಗಳನ್ನು (ಬಂದ್ ಝುರೋಕೆ, ನಕ್ಕಳಾ ರಾಜಕುಮಾರಿ) ನಿರ್ದೇಶಿಸಿದರು. ಆದರೆ ಕನ್ನಡ ಚಿತ್ರೋದ್ಯಮ ಅವರನ್ನೇನೂ ತೆರೆದ ಬಾಹುಗಳಿಂದ ಸ್ವಾಗತಿಸಲಿಲ್ಲ. ಆಕಾಶವಾಣಿಯಲ್ಲಿ ನಾಟಕವಾಗಿ ಜನಪ್ರಿಯವಾಗಿದ್ದ 'ನಕ್ಕಳಾ ರಾಜಕುಮಾರಿ' ಮಕ್ಕಳ ಚಿತ್ರ ಎಂಬ ನೆಪದಲ್ಲಿ ಸ್ವಲ್ಪ ಹೆಚ್ಚು ಪ್ರಚಾರ ಪಡೆಯಿತಷ್ಟೆ.

ಕನ್ನಡದ ಅತ್ಯಂತ ಜನಪ್ರಿಯ ನಟಿ ಜಯಂತಿ ಅವರೂ 80ರ ದಶಕದಲ್ಲಿ ಎರಡು ಸಿನಿಮಾಗಳನ್ನು (1987ರಲ್ಲಿ ವಿಜಯ್ ಮತ್ತು 1988ರಲ್ಲಿ – ಏನ್ ಸ್ವಾಮಿ ಅಳಿಯಂದ್ರೆ) ನಿರ್ದೇಶಿಸಿದ್ದರು ಎನ್ನುವುದು ಇವತ್ತು ಬಹಳಷ್ಟು ಮಂದಿ ಮರೆತೇಹೋಗಿರುವ ಅಂಶ. ಸ್ವತಃ ಅವರೇ ನಿರ್ಮಿಸಿದ ಈ ಎರಡು ಚಿತ್ರಗಳು ಮಾರುಕಟ್ಟೆಯಲ್ಲಿ ಅಂತಹ ಸದ್ದು ಮಾಡಲಿಲ್ಲ ಎನ್ನುವುದು ಬೇರೆ ವಿಷಯ.

ಆ ಬಳಿಕ 1999ರಲ್ಲಿ ಕವಿತಾ ಲಂಕೇಶ್ ನಿರ್ದೇಶಿಸಿದ ಚಿತ್ರ 'ದೇವೀರಿ' ತೆರೆಗೆ ಬಂತು. ತಮ್ಮ ತಂದೆ ಪಿ.ಲಂಕೇಶ್ ಅವರ 'ಅಕ್ಕ' ಕಥೆಯನ್ನೇ ಬೆಳ್ಳಿತೆರೆಗೆ ತಂದ ಕವಿತಾ ಮೊದಲ ಚಿತ್ರದಲ್ಲೇ ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದು ಸಾಕಷ್ಟು ಸುದ್ದಿ ಮಾಡಿದರು. ಬಾಲಿವುಡ್‌ನ ಶ್ರೇಷ್ಠ ನಟಿ ನಂದಿತಾ ದಾಸ್ ನಟಿಸಿದ್ದೂ ಈ ಚಿತ್ರ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆಯಲು ಒಂದು ಕಾರಣವಾಯಿತು. 18 ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಭಾಗವಹಿಸಿ 9 ಪ್ರಶಸ್ತಿಗಳನ್ನು ಗೆದ್ದ ಈ ಸಿನಿಮಾ, ಕವಿತಾ ಅವರಿಗೆ ಕನ್ನಡ ಚಿತ್ರರಂಗದಲ್ಲಿ ಅತ್ಯುತ್ತಮ ಆರಂಭವನ್ನು ಕೊಟ್ಟದ್ದು ಸುಳ್ಳಲ್ಲ. ಸದ್ಯಕ್ಕೆ ಸ್ಯಾಂಡಲ್‌ವುಡ್‌ನಲ್ಲಿ ಅತ್ಯಧಿಕ (10) ಸಿನಿಮಾಗಳನ್ನು ನಿರ್ದೇಶಿಸಿರುವ ಕವಿತಾ, ಈಗಲೂ ಸಕ್ರಿಯರಾಗಿದ್ದಾರೆ. ಕಳೆದ ತಿಂಗಳಷ್ಟೇ ಅವರ ನಿರ್ದೇಶನದ 'ಸಮ್ಮರ್ ಹಾಲಿಡೇಸ್' ಎಂಬ ಇಂಗ್ಲಿಷ್ ಮತ್ತು ಕನ್ನಡ ಭಾಷೆಯ ಮಕ್ಕಳ ಚಿತ್ರ ರೆಡಿ ಆಗಿದೆ. ಇಂಗ್ಲಿಷ್ ಚಿತ್ರ ಈಗಾಗಲೆ ಬಿಡುಗಡೆಯಾಗಿದ್ದು, ದೇಶಾದ್ಯಂತ ಶಾಲೆಗಳಲ್ಲಿ ಪ್ರದರ್ಶನ ಕಾಣುತ್ತಿದೆ.

ಸುಮನ್ ಕಿತ್ತೂರು ಕನ್ನಡದಲ್ಲಿ ಹೆಸರು ಮಾಡಿರುವ ಇನ್ನೊಬ್ಬ ನಿರ್ದೇಶಕಿ. 'ಆ ದಿನಗಳು' ಸಿನಿಮಾದಲ್ಲಿ ಅಸೋಸಿಯೇಟ್ ಡೈರೆಕ್ಟರ್ ಆಗಿ ವೃತ್ತಿಜೀವನ ಆರಂಭಿಸಿದ ಸುಮನ್, 2008ರಲ್ಲಿ 'ಸ್ಲಂ ಬಾಲ' ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕಿಯಾದರು. ಕಮರ್ಷಿಯಲ್ ಕನ್ನಡ ಚಿತ್ರಗಳಲ್ಲಿ ಪ್ರಮುಖ ಹೀರೊ ಆಗಿದ್ದ ದುನಿಯಾ ವಿಜಯ್ ಈ ಚಿತ್ರದ ಹೀರೊ ಆಗಿದ್ದು ವಿಶೇಷ. ಬಳಿಕ 'ಕಳ್ಳರ ಸಂತೆ' 'ಎದೆಗಾರಿಕೆ' ಮತ್ತು 'ಕಿರಗೂರಿನ ಗಯ್ಯಾಳಿಗಳು' ಸಿನಿಮಾಗಳ ಮೂಲಕ ಸುಮನ್, ತಾವೊಬ್ಬ ವಿಭಿನ್ನ ಚಿತ್ರನಿರ್ದೇಶಕಿ ಎನ್ನುವುದನ್ನು ಸಾಬೀತು ಪಡಿಸುತ್ತಾ ಹೋದರು. ಭೂಗತ ಜಗತ್ತಿನ ತಲ್ಲಣಗಳನ್ನು ಬಿಚ್ಚಿಟ್ಟ 'ಎದೆಗಾರಿಕೆ' ಸಿನಿಮಾ ರಾಜ್ಯ ಪ್ರಶಸ್ತಿಯ ಜತೆಗೆ ಹಲವು ಚಿತ್ರೋತ್ಸವಗಳಲ್ಲೂ ಸುದ್ದಿ ಮಾಡಿತು.

ಹಿರಿಯ ನಟಿ ಪ್ರತಿಮಾ ಸಿಂಗ್ ಮತ್ತು ನಿರ್ಮಾಪಕ ಶಂಕರ ಸಿಂಗ್ ಮಗಳು ವಿಜಯಲಕ್ಷ್ಮಿ ಸಿಂಗ್ ಕನ್ನಡದಲ್ಲಿ ನಿರ್ದೇಶಕಿಯಾಗಿ ಗಮನ ಸೆಳೆದಿರುವ ಇನ್ನೊಂದು ಹೆಸರು. ವಿಜಯಲಕ್ಷ್ಮಿ ಸಿಂಗ್ ಅವರದ್ದು ಚಿತ್ರರಂಗದಲ್ಲಿ ವಿಭಿನ್ನ ರೀತಿಯ ಪಯಣ. ಕೆಲವು ಸಿನಿಮಾಗಳಲ್ಲಿ ನಟಿಯಾಗಿ, ವಸ್ತ್ರವಿನ್ಯಾಸಕಿಯಾಗಿ, ನಿರ್ಮಾಪಕಿಯಾಗಿ ಯಶಸ್ಸು ಕಂಡ ಅವರದ್ದು, ಈಗ ನಿರ್ದೇಶಕಿಯ ಪಾತ್ರ. 'ಈ ಬಂಧನ' ಚಿತ್ರದ ಮೂಲಕ ನಿರ್ದೇಶನಕ್ಕೆ ಕಾಲಿಟ್ಟ ಅವರು, ಇದೀಗ 'ಯಾನ' ಚಿತ್ರದ ಮೂಲಕ ನಾಲ್ಕು ಚಿತ್ರಗಳ ನಿರ್ದೇಶಕಿ ಎನ್ನಿಸಿಕೊಂಡಿದ್ದಾರೆ. ಅದರಲ್ಲೂ 'ಯಾನ' ಚಿತ್ರದಲ್ಲಿ ತಮ್ಮ ಮೂವರು ಹೆಣ್ಣುಮಕ್ಕಳನ್ನೇ ನಟಿಯರಾಗಿ ನಿರ್ದೇಶಿಸಿರುವುದು ವಿಶೇಷ.

ಇವೆಲ್ಲ ಸೃಜನಶೀಲ, ಕಲಾತ್ಮಕ ಅಥವಾ ನೇರ ನಿರೂಪಣೆಯ ಸಿನಿಮಾಗಳ ಮಾತಾಯಿತು. ಕನ್ನಡದಲ್ಲಿ ಕಮರ್ಷಿಯಲ್ ಸಿನಿಮಾಗಳನ್ನು ನಿರ್ದೇಶಿಸಿದ ಮಹಿಳೆಯರಿಲ್ಲವೆ ಎಂಬ ಪ್ರಶ್ನೆ ಕೇಳಿದರೆ ಮೊದಲು ಕೇಳಿ ಬರುವ ಹೆಸರು ಪ್ರಿಯಾ ಹಾಸನ್ ಅವರದ್ದು.  ಪ್ರಿಯಾ ಹಾಸನ್ ಚಿತ್ರರಂಗ ಪ್ರವೇಶಿಸಿದ್ದು – 'ಬ್ಲ್ಯಾಕ್ ಅಂಡ್ ವೈಟ್' ಚಿತ್ರದ ನಾಯಕಿಯಾಗಿ. ಆ ಬಳಿಕ ಅವರದ್ದು